ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫಸಿ, ನ್ಯಾಯಾಲಯ ಅಂಕೋಲಾ

ಸಿಸಿ ನಂಬರ 292/2020

ಸಿ ಡಬ್ಲ್ಯೂ- **6**

ಪಿ ಡಬ್ಲ್ಯೂ- **6**

ದಿಃ 22-01-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

ಸಾಕ್ಷಿಯ ಹೆಸರುಃ ಮಂಜುನಾಥ ನಾಯ್ಕ

ತಂದೆಯ ಹೆಸರುಃ ಲಕ್ಷ್ಮಣ

ವಯಸ್ಸುಃ **56** ವರ್ಷ

ಉದ್ಯೋಗಃ ಕೆ.ಎಸ್.ಆರ್.ಟಿ.ಸಿ. ಸುಪರವೈಸರ್, ಅಂಕೋಲಾ

ವಿಳಾಸಃ ಶಿರೂರು, ಅಂಕೋಲಾ

ಮುಖ್ಯ ವಿಚಾರಣೆ ಮಾನ್ಯ ಎ ಪಿ ಪಿ ಯವರಿಂದಃ

2014 ರಿಂದ 2021 ರವರೆಗೆ ಅಂಕೋಲಾ ಕೆ.ಎಸ್.ಆರ್.ಟಿ.ಸಿ. ಡಿಪೋದಲ್ಲಿ ಪಾರುಪತ್ತೆದಾರ ಎಂದು ಕೆಲಸ ನಿರ್ವಹಿಸಿದ್ದೇನೆ. ಚಾಸಾ-**1** ರವರು ಘಟಕ ವ್ಯವಸ್ಥಾಪಕರಾಗಿದ್ದರು. ಚಾಸಾ-**1** ರಿಂದ **5, 7** ಮತ್ತು **8** ರವರು ಇಲಾಖಾ ಸಿಬ್ಬಂದಿಗಳಿರುತ್ತಾರೆ. ಆರೋಪಿ ಚಾಲಕ ಕಂ ನಿರ್ವಾಹಕನೆಂದು ಕೆಲಸ ಮಾಡುತ್ತಿದ್ದ. ದಿಃ **30-07-2018** ರಂದು ಆರೋಪಿತನು ಕರ್ತವ್ಯ ಮುಗಿಸಿಕೊಂಡು ಘಟಕಕ್ಕೆ ಬಸ್ಸನ್ನು ತೆಗೆದುಕೊಂಡು ಬಂದಿರುತ್ತಾನೆ. ಸದರಿ ಆರೋಪಿ ನಡೆಸಿಕೊಂಡು ಬಂದ ಬಸ್ಸಿಗೆ ಡಿಸೇಲ್ ತುಂಬಿಸಿದ ನಂತರ ಒಂದು ಲೀಟರ್ ಡಿಸೇಲ್ ಗೆ ವಾಹನ ಎಷ್ಟು ಓಡಬೇಕೆಂದು

ನಿಗದಿತ ಕಿ.ಮೀ. ಗಿಂತ ಕಡಿಮೆ ಇತ್ತು. ಈ ಕುರಿತು ನಾನು ಪ್ರಶ್ನಿಸಿದಾಗ ಆರೋಪಿ ಅದಕ್ಕೆ ಉತ್ತರಿಸದೇ ಸುಮ್ಮನಾಗಿರುತ್ತಾನೆ. ಮರುದಿವಸ ಆರೋಪಿ ನನಗೆ ಫೋನ್ ಮಾಡಿ, "ನೀನು ಡಿಪೋ ಮ್ಯಾನೇಜರ ಚಮ್ಚಾ ಮಾಡುತ್ತಿದ್ದೀಯಾ, ನೀನು ಹೇಗೆ ನೌಕರಿ ಮಾಡುತ್ತಿ ನೋಡಿಕೊಳ್ಳುತ್ತೇನೆ, ಡಿಸೇಲ್ ಕುರಿತಾಗಿ ಕೆ.ಎಮ್.ಪಿ.ಎಲ್. (ಕಿ.ಮೀ ಪರ್ ಲೀಟರ) ತೋರಿಸುವುದು ನನಗೆ ಬಿಟ್ಟಿದ್ದು" ಎಂದು ಮಾತನಾಡಿರುತ್ತಾನೆ. ಈ ಕುರಿತು ನಾನು ಚಾಸಾ-1 ರವರಿಗೆ ತಿಳಿಸಿರುತ್ತೇನೆ. ನಂತರ ಆರೋಪಿ ಕುರಿತಾಗಿ ಶಿರಸಿ ವಿಭಾಗಕ್ಕೆ ಚಾಸಾ-1 ರವರು ವರದಿ ರವಾನೆ ಮಾಡಿದಾಗ ಆರೋಪಿಗೆ ಡ್ಯೂಟಿ ನೀಡಬಾರದೆಂದು ಮೇಲಾಧಿಕಾರಿಗಳಿಂದ ಆದೇಶ ಬಂದಿರುತ್ತದೆ.

ದಿಃ 12-08-2018 ರಂದು ಮೇಲಾಧಿಕಾರಿಗಳ ಆದೇಶದ ಪ್ರತಿ ಪಡೆಯಲು ಆರೋಪಿ ಬೆಳಿಗ್ಗೆ 9.30 ಕ್ಕೆ ಬಂದಾಗ ನಾನು ಕೆಲಸ ಮಾಡುತ್ತಿದ್ದ ಡಿಪೋ ಕಾರ್ಯಗಾರದ ಬಳಿ ಬಂದು "ಬೋಳಿ ಮಗನೇ, ಸೂಳೆ ಮಗನೇ, ನಿನ್ನ ತಾಯಿ ಹಡಾ, ನೀನು ಮನೆಗೆ ಹೇಗೆ ಹೋಗುತ್ತೀಯಾ ನೋಡಿಕೊಳ್ಳುತ್ತೇನೆ, ನೌಕರಿ ಹೇಗೆ ಮಾಡುತ್ತೀಯಾ" ಎಂದು ಅವಾಚ್ಯ ಶಬ್ದಗಳಿಂದ ಬೈದು ಜೀವ ಬೆದರಿಕೆ ಹಾಕಿರುತ್ತಾರೆ. ಈ ಕುರಿತು ಚಾಸಾ-1 ರವರಿಗೆ ಮಾಹಿತಿ ತಿಳಿಸಿರುತ್ತೇನೆ. ಚಾಸಾ-7 ರವರಿಗೂ ಸಹ ಡಿಪೋದ ಭದ್ರತಾ ಗೇಟ್ ಬಳಿ ಅವಾಚ್ಯ ಶಬ್ದಗಳಿಂದ ಬೈದು, ಬಲಗಾಲಿನಿಂದ ಒದೆಯಲು ಹೋಗಿದ್ದರು. ಚಾಸಾ-1 ರವರಿಗೂ ಸಹ ದೂರವಾಣಿ ಮೂಲಕ ಅವಾಚ್ಯ ಶಬ್ದಗಳಿಂದ ಬೈದಾಡಿರುತ್ತಾರೆಂದು ಕೇಳಿ ತಿಳಿದುಕೊಂಡಿದ್ದೇನೆ. ಈ ಕುರಿತು ಚಾಸಾ-1 ಪ್ರಕರಣ ದಾಖಲಿಸಿದ್ದು, ಪೊಲೀಸರು ಸ್ಥಳಕ್ಕೆ

ಬಂದಾಗ ನಾನು ತೋರಿಸಿದ ಘಟನಾಸ್ಥಳವನ್ನು ಪೊಲೀಸರು ಸಾಯಂಕಾಲ 4.00 ಗಂಟೆಗೆ ಪಂಚನಾಮೆ ಮಾಡಿರುತ್ತಾರೆ. ಸಾಕ್ಷಿ ಪಂಚನಾಮೆ ಮೇಲಿನ ತನ್ನ ಸಹಿ ನೋಡಿ ಗುರುತಿಸಿದ್ದು, ಅದನ್ನು ನಿಪಿ–11ಸಿ ಎಂದು ಗುರುತಿಸಲಾಯಿತು. ಘಟನೆ ಕುರಿತು ಪೊಲೀಸರಿಗೆ ಹೇಳಿಕೆ ನೀಡಿರುತ್ತೇನೆ. ಸಾಕ್ಷಿ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

(ಪಾಟಿ ಸವಾಲನ್ನು ವಿನಂತಿ ಮೇರೆಗೆ ಮುಂದೂಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ )

ಓ ಹೇ ಕೇ ಸರಿ ಇದೆ

ಜೆ.ಎಂ.ಎಫ್.ಸಿ., ಅಂಕೋಲಾ.